# ಪ್ರೀತಿಯ ಕೊಳಲು ಮತ್ತು ಎಚ್ಚರಿಕೆಯ ಘಂಟೆ



ಎಚ್.ಎಸ್. ರಾಘವೇಂದ್ರ ರಾವ್

ನಮ್ಮ ನಾಯಕರು ಇಲ್ಲವಾಗಿ ಇಪ್ಪತ್ತು ದಿನಗಳಾದವು. ನೆಲ, ನೀರು, ಗಾಳಿ, ಬೆಳಕು ಯಾವುದೂ ಬದಲಾಗಿಲ್ಲ. ಆದರೂ ನಮ್ಮೊಳಗಿನ ಏನೋ ಒಂದು ಕಳೆದುಹೋಗಿದೆ. (ಈ ನಡುವೆ ಸಂವೇದನಾಶೀಲ ಕವಿ ಹೃದಯದ ಗೆಳೆಯ –ರಾಮು ಕೂಡ ಹೋಗಿ ಮೈಸೂರು ಮತ್ತಷ್ಟು ಬಡವಾಯಿತು.) ನಾಯಕರ ಆ ನಗುಮುಖ, ಆ 'ನಿಜ ದನಿ', ಆ 'ದಿಟ್ಟ ಪ್ರಾಮಾಣಿಕ ನಿಲುವುಗಳು', ಹೊರಗೆ ಮರೆಯಾಗಿ ಒಳಗೆ ಉಳಿಯುವ, ಉಳಿಯಬೇಕಾದ ಸಂಗತಿಗಳು. ನನಗೆ ಮತ್ತು ನನ್ನ ಮಡದಿ, ಮಗನಿಗೆ ಅವರು ಕೇವಲ ವಿಮರ್ಶಕರಲ್ಲ, ನಮ್ಮಂತಹ ಹಲವರಿಗೆ ಅವರು ಪ್ರೀತಿಯ ಚಿಲುಮೆಯಾಗಿದ್ದರು. ಬರವಣಿಗೆಯಲ್ಲಿ ತೋರಿಸಬಾರದೆಂದು ಅವರು ಪಣತೊಟ್ಟಿದ್ದ ಭಾವನೆ, ಭಾವುಕತೆಗಳು ಅವರ ನಿಜಜೀವನದಲ್ಲಿ ತುಂಬಿತುಳುಕುತ್ತಿದ್ದವು. ಅವರು ನಮಗೆಲ್ಲರಿಗೂ ಅನುಸರಿಸಬೇಕಾದ ಮಾದರಿ. ಅನುಸರಿಸಲಾಗದ ಮಾದರಿ ಮತ್ತು ಹಲಕೆಲವು ಕಡೆ ಅನುಸರಿಸಬಾರದ ಮಾದರಿ.

ಜಿ.ಎಚ್.ಎನ್. ನೇರವಾಗಿ ನನ್ನ ಗುರುಗಳಾಗಿರಲಿಲ್ಲ. ಅವರ ಹಲವು ಭಾಷಣಗಳನ್ನು ನಾನು ಕೇಳಿದ್ದೇನೆ. ಅವರು ಕೇಳುವವರನ್ನು ಪರವಶಗೊಳಿಸುವ ಮಾತುಗಾರರೂ ಆಗಿರಲಿಲ್ಲ. ಆದರೆ, ಗಮನವಿಟ್ಟು ಕೇಳಿದಾಗ ಅಲ್ಲಿ ವಿವೇಕ, ವಿವೇಚನೆ, ನಿಖರತೆ ಮತ್ತು ಒಳನೋಟಗಳು ಕಾಣುತ್ತಿದ್ದವು. ನನ್ನ ಅದೃಷ್ಟದಿಂದ ಅವರೊಂದಿಗೆ ಗಂಟೆಗಟ್ಟಲೆ ಮಾತನಾಡುವ, ದಿನಗಟ್ಟಲೆ ಒಟ್ಟಾಗಿ ಇರುವ ಅವಕಾಶ ಸಿಕ್ಕಿತು. ಬಾಲ್ಯದಿಂದ ಮೊದಲಾಗಿ ಮಾತನಾಡುವ ಆ ಕ್ಷಣದವರೆಗಿನ ಅವರ ಅನುಭವಗಳನ್ನು, ಅನಿಸಿಕೆಗಳನ್ನು ಮತ್ತೆ ಮತ್ತೆ ಕೇಳಿಸಿಕೊಳ್ಳುವ ಅವಕಾಶ ಸಿಕ್ಕಿತು. ಆಗ ಅವರ ನಗೆಮೊಗದ ಹಿಂದಿನ ಪ್ರಕ್ಷುಬ್ಧತೆ, ಚಿಂತನಪರತೆಯ ಹಿಂದಿನ ಆರ್ದ್ರತೆಗಳು ತಿಳಿದು ಬಂದವು. ಅವರು ನಿಜಕ್ಕೂ 'ಅಶಾಂತ ಸಂತ' ಎನ್ನಿಸಿಬಿಡುತ್ತಿತ್ತು. ಅವರ ಆಜೀವನ ಜೊತೆಗಾತಿಯಾದ 'ಧೀರ ವನಿತೆ' ಮೀರಕ್ಕ, ಆ ಮನೆಗೆ ಒಂದಿಷ್ಟು ಅಲ್ಲ, ಅದೆಷ್ಟು ಸಂತೋಷ ತಂದ ಮಗಳು ಕೀರ್ತಿ, ಮಗನಂತಹ ಅಳಿಯ ಮದನ ನಾಯಕ, (ಮದನ ಎನ್ನುವ ಹೆಸರು ನಾಯಕರಿಗೂ ಅನ್ವರ್ಥವೇ. ಆದರೆ, ಹಾಗೆ ಹೇಳಿದರೂ ಅವರ ಮುಖ ನಾಚಿಕೆಯಿಂದ ಗುಲಾಬಿಯಾಗುತ್ತಿತ್ತು.) ಇವರೆಲ್ಲರ ಮಮತೆಯ ಮಗು ಚಕಿತಕ್ಕ ಎಲ್ಲರೂ ಸೇರಿ ಒಂದು ರಾಗಮೇಳ ಏರ್ಪಡುವುದನ್ನು ನೋಡಿದವನು ನಾನು. ಇವರ ಸ್ನೇಹವಲಯದೊಳಗೆ ಬಂದವರು ಅಲ್ಲಿಂದ ಉಚ್ಚಾಟನೆಯಾಗುವ ಸಂಭವ ಬಹಳ ಕಡಿಮೆ. ಹಾಗೆಯೇ ಅದರ ಹೊರಗುಳಿದವರಿಗೆ, ಹೊರಗೆ ಹೋದವರಿಗೆ ಪ್ರವೇಶ/ಮರುಪ್ರವೇಶಗಳೂ